# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | **814** |
| **ಸದಸ್ಯರ ಹೆಸರು** | **ಶ್ರೀ ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | **20.09.2022** |
| **ಉತ್ತರಿಸಬೇಕಾದ ಸಚಿವರು** | **ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** |
| **ಪ್ರಶ್ನೆ** | **ಉತ್ತರ** |
| ಅ) ದೇಶದ ಮೊಟ್ಟಮೊದಲ ಸೆಮಿಕಂಡಕ್ಟರ್ ಯೂನಿಟ್ ನಿರ್ಮಾಣವನ್ನು ಮೈಸೂರಿನಲ್ಲಿ ಸ್ಥಾಪನೆ ಮಾಡಲಾಗುವುದೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ಕರ್ನಾಟಕದಲ್ಲಿ Semiconductor Fab ಸ್ಥಾಪಿಸಲು ಕರ್ನಾಟಕ ಸರ್ಕಾರದ ವಿದ್ಯುನ್ಮಾನ, ಮಾತಂ, ಜೈತಂ ಹಾಗೂ ವಿ&ತಂ ಇಲಾಖೆಯು ISMC Analog Fab Pvt. Ltd. ನ Consortium ರೊಂದಿಗೆ [ಇದರಲ್ಲಿ ಇಸ್ರೇಲ್ ದೇಶದ Tower Semiconductor Fab ರವರು ತಂತ್ರಜ್ಞಾನ ಪಾಲುದಾರರಾಗಿದ್ದಾರೆ] ದಿನಾಂಕ 1 ಮೇ, 2022ರಂದು ಒಡಂಬಡಿಕೆ ಮಾಡಿಕೊಂಡಿದೆ. ಸದರಿ ಕಂಪನಿಯು ಮೈಸೂರಿನಲ್ಲಿ ಸದರಿ ಯೋಜನೆಯನ್ನು ಸ್ಥಾಪಿಸಲು ಆಸಕ್ತಿ ವ್ಯಕ್ತಪಡಿಸಿದೆ.<br><br>ಇದು ರಾಜ್ಯದಲ್ಲಿನ ಮೊಟ್ಟಮೊದಲ ಸೆಮಿಕಂಡಕ್ಟರ್ ಘಟಕವಾಗಲಿದೆ. ಈ ಯೋಜನೆಗೆ ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ನಿರೀಕ್ಷಿಸಲಾಗುತ್ತಿದೆ. |
| ಆ) ಈ ಸೆಮಿಕಂಡಕ್ಟರ್ ಯೂನಿಟ್ ನಿರ್ಮಿಸಲು ಮೈಸೂರಿನ ಯಾವ ಸ್ಥಳದಲ್ಲಿ ಎಷ್ಟು ಜಮೀನನ್ನು ಗುರುತಿಸಲಾಗಿದೆ; (ವಿವರ ನೀಡುವುದು) | ಸದರಿ ಯೋಜನೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಮೈಸೂರಿನಲ್ಲಿ ಕೋಚನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 150 ಎಕರೆಯಷ್ಟು ವಿಸ್ತೀರ್ಣದ ಜಮೀನನ್ನು ಗೊತ್ತುಪಡಿಸಿದೆ. |
| ಇ) ಈ ಸೆಮಿಕಂಡಕ್ಟರ್ ಯೂನಿಟ್ ನಿರ್ಮಾಣಕ್ಕೆ ಹೂಡುತ್ತಿರುವ ಬಂಡವಾಳವೆಷ್ಟು ಮತ್ತು ಸ್ಥಳೀಯವಾಗಿ ಎಷ್ಟು ಜನರಿಗೆ ಉದ್ಯೋಗಾವಕಾಶಗಳು ದೊರಕಲಿದೆ; (ವಿವರವಾದ ಮಾಹಿತಿ ನೀಡುವುದು) | ISMC Analog Fab Pvt. Ltd. ರವರಿಂದ 7 ವರ್ಷಗಳೊಳಗೆ ರೂ.22,900 ಕೋಟಿ ($ 3 ಬಿಲಿಯನ್) ಹೂಡಿಕೆ ಮಾಡಲು ಪ್ರಸ್ತಾವಿಸಿರುತ್ತದೆ. ಸದರಿ ಸೆಮಿಕಂಡಕ್ಟರ್ ಘಟಕದಿಂದ ಸುಮಾರು 1,500 ನೇರ ಉದ್ಯೋಗ ಹಾಗೂ ಸುಮಾರು 6500-8,500 ಪರೋಕ್ಷ ಉದ್ಯೋಗಗಳನ್ನು ಸೃಜಿಸಲಾಗುತ್ತದೆ. |

| | |
|---|---|
| ಈ) ಸುಸಜ್ಜಿತ ದಶಪಥ, ವಿಮಾನ ನಿಲ್ದಾಣ, ರೈಲ್ವೆ ಸಂಪರ್ಕ ಹೊಂದಿರುವ ಮೈಸೂರನ್ನು ಐಟಿ ಬಿಟಿ ಹಾಗೂ ಭಾರೀ ಉದ್ಯಮ ಕ್ಷೇತ್ರವಾಗಿ ಬೆಂಗಳೂರಿಗೆ ಪರ್ಯಾಯವಾಗಿ ಮೈಸೂರನ್ನು ಬೆಳೆಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರವಾದ ಮಾಹಿತಿ ಒದಗಿಸುವುದು) | ರಾಜ್ಯ ಸರ್ಕಾರವು ಈ ಕೆಳಕಂಡ ಉಪಕ್ರಮಗಳನ್ನು ಕೈಗೊಳ್ಳುವ ಮೂಲಕ ಮೈಸೂರನ್ನು ಐಟಿ, ಬಿಟಿ ಹಾಗೂ ಭಾರಿ ಉದ್ಯಮಗಳ ಹಬ್ ಆಗಿ ಪ್ರೋತ್ಸಾಹಿಸುತ್ತಾ ಬಂದಿದೆ:-<br>• ಐಟಿ ನೀತಿ, ಇ.ಎಸ್.ಡಿ.ಎಂ. ನೀತಿ, ಜೈವಿಕ ತಂತ್ರಜ್ಞಾನ ನೀತಿ, ಸ್ಟಾರ್ಟ್‌ಅಪ್ ನೀತಿ ಹಾಗೂ ಕೈಗಾರಿಕಾ ನೀತಿಗಳು ರಾಜ್ಯದ ಹಂತ 2 / 3ರ ನಗರಗಳನ್ನು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿವೆ.<br>• ಪ್ರಸ್ತುತವಾಗುವ ನೀತಿಗಳಡಿ ಪ್ರೋತ್ಸಾಹಕಗಳನ್ನು ಮತ್ತು ರಿಯಾಯಿತಿಗಳನ್ನು ಪಡೆದುಕೊಳ್ಳಲು ಇದುವರೆಗೆ 25 ಐಟಿ ಕಂಪನಿಗಳು, 4 ಇ.ಎಸ್.ಡಿ.ಎಂ. ಕಂಪನಿಗಳು ಹಾಗೂ 3 ಬಯೋಟೆಕ್ ಕಂಪನಿಗಳು ಐಟಿ&ಬಿಟಿ ನಿರ್ದೇಶನಾಲಯದಲ್ಲಿ ನೋಂದಣಿಯಾಗಿವೆ.<br>• ಇ.ಎಸ್.ಡಿ.ಎಂ. ಘಟಕಗಳನ್ನು ಬೆಂಬಲಿಸುವ ಸಲುವಾಗಿ ಮೈಸೂರಿನಲ್ಲಿ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ 'ಮೈಸೂರು ಇ.ಎಸ್.ಡಿ.ಎಂ. ಕ್ಲಸ್ಟರ್' ಸ್ಥಾಪಿಸಲಾಗಿದೆ.<br>• ಇನ್ಫೋಸಿಸ್ ಕಂಪನಿಯು ಮೈಸೂರಿನಲ್ಲಿ Global Leadership Centre ಸ್ಥಾಪಿಸಿದೆ.<br>• 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ Global Technology Centre Plug and Play Facilityಯನ್ನು ಸ್ಥಾಪಿಸಲಾಗುತ್ತಿದೆ.<br>• ಬಿಯೋಂಡ್ ಬೆಂಗಳೂರು ಕಾರ್ಯಕ್ರಮದಡಿ ಸ್ಟಾರ್ಟ್‌ಅಪ್‌ಗಳು, ನಾವೀನ್ಯತೆ ಮತ್ತು ವಾಣಿಜ್ಯೋದ್ಯಮವನ್ನು ಪ್ರೋತ್ಸಾಹಿಸಲಾಗುತ್ತಿದೆ.<br>• 'ಎಲಿವೇಟ್' ಯೋಜನೆಯಡಿ, ವಿದ್ಯುನ್ಮಾನ, ಮಾತಂ, ಜೈತಂ ಹಾಗೂ ವಿ&ತಂ ಇಲಾಖೆಯಿಂದ ಮೈಸೂರಿನ 23 ನವೋದ್ಯಮಗಳನ್ನು ಬೆಂಬಲಿಸಲಾಗಿದೆ.<br>• ಮೈಸೂರಿನಲ್ಲಿ ಡಿಸೆಂಬರ್ 2022ರಲ್ಲಿ UNLEASH ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಇದರಲ್ಲಿ ಹೊಸ ಪರಿಕಲ್ಪನೆಗಳನ್ನು ಹಂಚಿಕೊಳ್ಳಲು, ಸಂಪರ್ಕವೇರ್ಪಡಿಸಿಕೊಳ್ಳಲು ಹಾಗೂ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ [SDGs] ಪರಿಹಾರಗಳನ್ನು ಸೃಜಿಸುವ ನಿಟ್ಟಿನಲ್ಲಿ ವಿವಿಧ ದೇಶಗಳಿಂದ ಬರುವ ಸುಮಾರು 1000 ಯುವಜನರು ಭಾಗವಹಿಸಲಿದ್ದಾರೆ. |

| | |
|---|---|
| | • ಎಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಹೊಸ ಪರಿಕಲ್ಪನೆಗಳು ಹಾಗೂ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಇಲಾಖೆಯಿಂದ New Age Incubation Network ಯೋಜನೆಯಡಿ ಮೈಸೂರಿನಲ್ಲಿ 5 ಕೇಂದ್ರಗಳನ್ನು ಸ್ಥಾಪಿಸಲಾಗಿದೆ.<br>• ಐಟಿ ರಫ್ತುಗಳನ್ನು ಪ್ರೋತ್ಸಾಹಿಸಲು STPI ಸಂಸ್ಥೆಯು ಮೈಸೂರಿನಲ್ಲಿ ಕೇಂದ್ರವೊಂದನ್ನು ಸ್ಥಾಪಿಸಿದೆ.<br>• CFTRI ಸಹಯೋಗದೊಂದಿಗೆ ಮೈಸೂರಿನಲ್ಲಿ Nutri-Neutraceutical Phyto-Pharmaceuticals [N2P2] Incubation Centreನ್ನು ಸ್ಥಾಪಿಸಲಾಗಿದೆ.<br>• ಕೈಗಾರಿಕಾ ನೀತಿಯಡಿ ಮೈಸೂರು ವಲಯ-2 ರಡಿ ಬರುತ್ತಿದ್ದು, ಅದರನ್ವಯ ಮೈಸೂರಿನಲ್ಲಿ ಸ್ಥಾಪಿಸಿರುವ ಘಟಕಗಳು ಸದರಿ ನೀತಿಯಡಿ ಕೆಲವು ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳಿಗೆ ಅರ್ಹವಾಗುತ್ತವೆ.<br>• ಮೈಸೂರಿನಲ್ಲಿ ಏಪ್ರಿಲ್ 2022ರಲ್ಲಿ ಹಮ್ಮಿಕೊಳ್ಳಲಾದ 'ಉದ್ಯಮಿಯಾಗು ಉದ್ಯೋಗ ನೀಡು' ಎಂಬ ಕಾರ್ಯಕ್ರಮದಲ್ಲಿ ಅಂತಿಮ ವರ್ಷದ MBA ಮತ್ತು BE ಕೋರ್ಸ್‌ಗಳ ಸುಮಾರು 6,100 ವಿದ್ಯಾರ್ಥಿಗಳು ಹಾಗೂ ಮುಂಚೂಣಿಯ ಕೈಗಾರಿಕೋದ್ಯಮಿಗಳು ಭಾಗವಹಿಸಿದರು.<br>• ಕಳೆದ ಮೂರು ವರ್ಷಗಳಲ್ಲಿ ಮೈಸೂರಿಗೆ, ರೂ.2,147 ಕೋಟಿ ಹೂಡಿಕೆಯಿರುವ ಹಾಗೂ 7,445 ಹೊಸ ಉದ್ಯೋಗಗಳು ಸೃಜನೆಯಾಗುವ 77 ಕೈಗಾರಿಕಾ ಕಾರ್ಯಯೋಜನೆಗಳನ್ನು ಅನುಮೋದಿಸಲಾಗಿದೆ. |

(ಐಟಿಬಿಟಿ 98 ಎಲ್‌ಸಿಎಂ 2022)

**(ಡಾ॥ ಅಶ್ವಥ್ ನಾರಾಯಣ ಸಿ. ಎನ್.)**
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.